ಲೆಹಂಗಾ ಅಂದಾಗ ಕಣ್ಸೆಳೆಯುವ ವಿನ್ಯಾಸದ ಲಾಂಗ್ ಸ್ಕರ್ಟ್ ಅದರ ಮೇಲೊಂದು ಸುಂದರವಾದ ಲೆಹಂಗಾಕ್ಕೆ ಮ್ಯಾಚ್ ಆಗುವ ಬ್ಲೌಸ್ ಹಾಗೂ ವಿಶೇಷ ವಿನ್ಯಾಸದ ಒಂದು ದುಪಟ್ಟಾ ಇರಬೇಕು. ಆದರೆ ಇದೀಗ ಈ ಲೆಹೆಂಗಾಕ್ಕೆ ಬ್ಲೌಸ್ ತೊಡುವುದು ಹಳೆ ಫ್ಯಾಷನ್ ಆಗಿದ್ದು, ಬ್ಲೌಸ್ ಬದಲಿಗೆ ಈಗ ಶರ್ಟ್ ಬಂದಿದೆ. ಅದ್ದೂರಿ ವಿನ್ಯಾಸದ ಲಾಂಗ್ ಸ್ಕರ್ಟ್ ಮೇಲೆ ಸಾದಾ, ಸರಳ ವಿನ್ಯಾಸದ ಶರ್ಟ್ ಇದೀಗ ಫ್ಯಾಷನ್ ಲೋಕದಲ್ಲಿ ಒಂದು ಟ್ರೆಂಡನ್ನೇ ಸೃಷ್ಟಿಸಿದೆ.

ಬಾಲಿವುಡ್‌ನಲ್ಲಿ ಈಗಾಗಲೇ ಈ ಟ್ರೆಂಡ್ ಆರಂಭವಾಗಿದ್ದು, ಯಂಗ್ ಜನರೇಷನನ್ ಯುವತಿಯರು ಆಗಲೇ ಅನುಕರಣೆ ಮಾಡತೊಡಗಿದ್ದಾರೆ. ಈ ತರಹದ ಫ್ಯಾಷನ್ ಹೆಚ್ಚು ಸುದ್ದಿಯಾಗಿದ್ದು ಬಾಲಿವುಡ್ ನಟಿ ಕಾಜೋಲ್ ಅವರಿಂದ. ಕಾಜೋಲ್ ಹಿಂದಿ ಚಿತ್ರರಂಗದ ಹೆಸರಾಂತ ನಟಿಯಾಗಿದ್ದು, ಇದೀಗ ಕೆಲ ದಿನಗಳಿಂದ ಚಿತ್ರರಂಗದಿಂದ ದೂರ ಉಳಿದಿದ್ದರೂ ಈ ತರಹದ ಸ್ಟೈಲ್ ಸ್ಟೇಟ್‌ಮೆಂಟ್‌ಗಳಿಗೆ ಗುರುತಾದವರು. ಇಂತಹ ಹೊಸ ಫ್ಯಾಷನ್ ಟ್ರೆಂಡ್‌ಗಳಿಂದ ಆಗಾಗ ಸುದ್ದಿಯಲ್ಲಿರುವ ಕಾಜೋಲ್ ತಮ್ಮ ಹೊಸ ಚಿತ್ರದ ಪ್ರಚಾರದಲ್ಲಿ ಶರ್ಟ್ ಲೆಹಂಗಾ ತೊಟ್ಟು ಮಿಂಚಿದ್ದು, ಅವರ ಡ್ರೆಸ್ಸಿನಿಂದಲೇ ಸುದ್ದಿಯಾಗಿದ್ದಾರೆ. ಈ ಫೋಟೋಗಳು ವೈರಲ್ ಆಗುತ್ತಿದ್ದಂತೆ ಬಾಲಿವುಡ್ ನಟಿಯರಾದ ಕಂಗನಾ, ಸೋನಂ, ಕರೀನಾ ಮುಂತಾದವರು ಈ ಟ್ರೆಂಡ್‌ಗೆ ಮಾರುಹೋಗಿ ತಾವೂ ಈ ತರಹದ ಡ್ರೆಸ್ ಧರಿಸಿ ಫೋಟೋ ಶೂಟ್ ಮಾಡಿಸಿ ಒಂದು ಹೊಸ ಟ್ರೆಂಡನ್ನೇ ಹುಟ್ಟುಹಾಕಿದ್ದಾರೆ.



ಲೆಹಂಗಾ ಸ್ಕರ್ಟ್ ಅತ್ಯಾಕರ್ಷಕವಾಗಿ ಕಾಣಲು ಅದರ ಮೇಲೆ ತೊಡುವ ಬ್ಲೌಸ್‌ನ ಪಾತ್ರವೂ ಕೂಡ ಬಹಳ ಮುಖ್ಯ. ಸಭೆ ಸಮಾರಂಭಕ್ಕೆ ಧರಿಸುವ ಸೀರೆ, ಲೆಹಂಗಾಗಳ ಮೇಲೆ ತೊಡುವ ವೆರೈಟಿ ಬ್ಲೌಸಗಳ ಆಯ್ಕೆಗಳಿಗೂ ಮಹಿಳೆಯರು ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಲೆಹಂಗಾಗಳ ಬಣ್ಣಕ್ಕೆ ತಕ್ಕಂತೆ ಬ್ಲೌಸ್‌ಗಳಿಗೆ ಆಕರ್ಷಕವಾಗಿ ವಿನ್ಯಾಸ ಹಾಗೂ ಕುಸುರಿ ಮಾಡಿಸಿಕೊಳ್ಳುತ್ತಿದ್ದಾರೆ. ಅವುಗಳ ತೋಳಿನಲ್ಲೂ ಸಾಕಷ್ಟು ವಿನ್ಯಾಸಗಳಿವೆ. ಉದ್ದ ತೋಳು, ಮುಕ್ಕಾಲು ತೋಳು, ಪುಗ್ಗ ತೋಳು, ಬಲೂನ್ ಮಾದರಿಯ ತೋಳು ಹೀಗೆ ಸಾಕಷ್ಟು ವಿನ್ಯಾಸಗಳಿವೆ. ಹಾಗೇ ನೆಕ್ ಡಿಸೈನ್ ಕೂಡ ಸಾಕಷ್ಟು ವರೈಟಿಗಳಿವೆ. ರೌಂಡ್ ನೆಕ್, ಸ್ಕ್ವೇರ್ ನೆಕ್, ಡೀಪ್ ನೆಕ್, ವಿ ನೆಕ್... ಹೀಗೆ ನಾನಾ ವಿಧದಲ್ಲಿ ಬ್ಲೌಸ್ ಹೊಲಿಸಿಕೊಳ್ಳುವುದು ಇದೀಗ ಫ್ಯಾಷನ್ ಆಗಿದೆ.

ಈಗ ಈ ಟ್ರೆಂಡ್‌ಗೆ ಮತ್ತೊಂದು ಸೇರ್ಪಡೆ ಎಂದರೆ ಸಾದಾ ಶರ್ಟ್ ಜೊತೆಗೆ ಕಾಲರ್ ನೆಕ್. ಈ ತರಹದ ಶರ್ಟ್‌ಗಳು ಲೆಹಂಗಾಕ್ಕೆ ಅಂದ ಕಾಣುವುದರ ಜೊತೆಗೆ ಗುಂಪಿನಲ್ಲಿ ಎದ್ದು ಕಾಣುವಂತೆ ಮಾಡುತ್ತದೆ. ಆದರೆ ಈ ರೀತಿ ಲೆಹಂಗಾಗಳು ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಸರಿಹೊಂದುವುದಿಲ್ಲ. ಗೆಟ್ ಟುಗೆದರ್ ಪಾರ್ಟಿ, ರಿಸೆಪ್ಷನ್, ಮೆಹಂದಿ ಕಾರ್ಯಕ್ರಮ, ಕಾಲೇಜ್ ಎಥ್ನಿಕ್ ಡೇ ಮೊದಲಾದ ಕಾರ್ಯಕ್ರಮಗಳಿಗೆ ಇದು ಸರಿಹೊಂದುತ್ತವೆ. ಎಲ್ಲರಿಗಿಂತ ಡಿಫರೆಂಟ್ ಆಗಿ ಕಾಣಬೇಕು ಎಂದು ಬಯಸುವವರು ಹೀಗೆ ಲೆಹಂಗಾ ಶರ್ಟ್ ಧರಿಸಿ ಮಿಂಚಬಹುದು.

ಲೆಹಂಗಾ ಶರ್ಟ್ ಆಯ್ಕೆ ಮಾಡಿಕೊಂಡ ಬಳಿಕ, ಅದೇ ಬಣ್ಣದ ಸಿಲ್ಕ್ ಬಟ್ಟೆ ಅಥವಾ ಕಾಟನ್ ಬಟ್ಟೆಗಳಿಂದ ಶರ್ಟ್ ಹೊಲಿಸಿಕೊಳ್ಳಬೇಕು. ಶರ್ಟ್‌ಗಳನ್ನು ಇನ್‌ಶರ್ಟ್ ಮಾಡಿದರೆ ಇನ್ನೂ ಸುಂದರವಾಗಿ ಕಾಣುತ್ತದೆ. ಇದಲ್ಲದೆ ಇದರ ಮೇಲೆ ದುಪಟ್ಟಾ ತೊಡುವ ಅವಶ್ಯಕತೆ ಕೂಡ ಇಲ್ಲ. ಇನ್ನು ತುಂಬಾ ಗ್ರ್ಯಾಂಡಾಗಿರುವ ಲೆಹಂಗಾಗಳನ್ನು ಸಾಮಾನ್ಯವಾಗಿ ಒಂದೋ ಅಥವಾ ಎರಡೋ ಬಾರಿ ತೊಟ್ಟಿರುವವರು ಈಗ ಈ ಫ್ಯಾಷನ್ ಟ್ರೈ ಮಾಡಬಹುದು. ಕಾಟನ್ ಸಿಲ್ಕ್, ಖಾದಿ ಹಾಗೂ ಜೂಟ್ ಸಿಲ್ಕ್‌ಗಳ ಲೆಹಂಗಾ ತೊಟ್ಟಾಗ, ಅದಕ್ಕೆ ಉದ್ದುದ್ದ ಗೆರೆಗಳುಳ್ಳ ಶರ್ಟ್ ತೊಡಬಹುದು. ಈ ತರಹದ ಲೆಹಂಗಾ ತೊಟ್ಟಾಗ ಹೆಚ್ಚು ಆಭರಣಗಳ ಅವಶ್ಯಕತೆ ಇಲ್ಲ. ಕಿವಿಗೆ ಹ್ಯಾಂಗಿಂಗ್ ಅಥವಾ ಜುಮುಕಿ ತೊಟ್ಟು ಕೂದಲನ್ನು ಗಾಳಿಗೆ ಹಾರಿಬಿಟ್ಟರೆ ಸಾಕು ಚೆನ್ನಾಗಿ ಕಾಣುತ್ತದೆ. ■

## ಲೆಹಂಗಾ ಶರ್ಟ್ ಕೆಲ ಟಿಪ್ಸ್

- ಲೆಹಂಗಾ ತೊಡುವವರು ಮೇಲೆ ವೈಟ್ ಕಲರ್‌ನ ಶರ್ಟ್ ತೊಟ್ಟರೆ ಚೆನ್ನಾಗಿ ಕಾಣುತ್ತದೆ.
- ಉಡುಪಿನ ಮೇಲೆ ಕೇಶ ವಿನ್ಯಾಸ ಕೂಡ ಚೆನ್ನಾಗಿರಬೇಕು. ಆದ್ದರಿಂದ ಕೂದಲನ್ನು ಎತ್ತಿ ಕಟ್ಟಿ ಪೋನಿ ಟೈಲ್ ಹಾಕಿಕೊಳ್ಳಬಹುದು. ಇಲ್ಲವೇ ಯಾವುದಾದರೂ ಲೇಟೆಸ್ಟ್ ಹೇರ್ ಸ್ಟೈಲ್ ಮಾಡಿಕೊಳ್ಳಬಹುದು.
- ಲೆಹಂಗಾದ ಜೊತೆ ವೆರೈಟಿ ಪಾದರಕ್ಷೆಗಳನ್ನು ಧರಿಸುವುದು ಒಳ್ಳೆಯದು.
- ವಯೋಮಿತಿಗೆ ಅನುಗುಣವಾಗಿ ಉಡುಪು ಧರಿಸಿ.
- ಮದುವೆ ಸಮಾರಂಭಕ್ಕೆ ಈ ತರಹದ ಉಡುಪು ಹೊಂದುವುದಿಲ್ಲ.
- ಪಾರ್ಟಿಗಳಿಗೆ ಹೋಗುವಾಗ ಆರಾಮವಾಗಿ ತೊಡಬಹುದು.